<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C No. 2004/2023
CW-3 PW-3

ಹೆಸರು : ಖಲೀಲ್

ತಂದೆಯ ಹೆಸರು: ಸಾಹೆಬ್ ಪಟೇಲ್

ವಯಸ್ಸು : 39 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಮಂಗಲಗಿ

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 12-01-2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನನಗೆ ಚಾಸಾ-2ರವರ ಪರಿಚಯ ಇದೆ.

ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ. ನಾನು ಹೊಲಕ್ಕೆ ಹೋಗುತ್ತಿದ್ದಾಗ ಪೋಲೀಸರು ಕೆಲವು ದಾಖಲೆಗಳ ಮೇಲೆ ನನ್ನ ಸಹಿಗಳನ್ನು ಪಡೆದಿರುತ್ತಾರೆ. ಪೋಲೀಸರು ನನ್ನ ಸಮಕ್ಷಮ ಆರೋಪಿತನಿಂದ ಯಾವುದೇ ಮು.ಮಾ. ನ್ನು ಜಪ್ತುಪಡಿಸಿಕೊಂಡು ಪಂಚನಾಮೆಯನ್ನು ಜರುಗಿಸಿಲ್ಲ. ನಾನು ಆರೋಪಿಯನ್ನು ಈ ಮೊದಲು ನನ್ನ ಊರಿನಲ್ಲಿ ನೋಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ಪಂಚನಾಮೆಯನ್ನು ತೋರಿಸಲಾಗಿ ಅದು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-2ಸಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮು.ಮಾ. 2ನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸದರಿ ಸಹಿಯನ್ನು ಮು.ಮಾ. 2ಸಿ ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರ ಬಳಿ ಯಾವುದೇ ಹೇಳಿಕೆ ನೀಡಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು  ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ  ಪಾಟೀ ಸವಾಲಿಗೆ ಅನುಮತಿ  ನೀಡಲಾಯಿತು.)

<u>ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ</u>

ದಿಃ 05.05.2023 ರಂದು ಪೋಲೀಸರು ನಿಮ್ಮನ್ನು ಪಂಚರಾಗಿ ಬರಲು ಕರೆದಿದ್ದರು ಎಂದರೆ ಸರಿಯಲ್ಲ.  ಆಗ ನೀವು ಮತ್ತು ಚಾಸಾ- 2ರವರು ಪಂಚರಾಗಿ ಬರಲು ಒಪ್ಪಿ  ಇಲಾಖಾ ವಾಹನದಲ್ಲಿ ಪೋಲೀಸರೊಂದಿಗೆ ಘಟನಾ ಸ್ಥಳಕ್ಕೆ ಹೋಗಿದ್ದೀರಿ ಎಂದರೆ ಸರಿಯಲ್ಲ.  ಮಧ್ಯಾಹ್ನ 03.00 ಗಂಟೆಗೆ ಮಂಗಲಗಿ ಗ್ರಾಮದ ಬ್ರಿಡ್ಜ್ ಬಳಿ ತಲುಪಿ ಭವಾನಿ ಗುಡಿ ಕಂಪೌಡ್ ಹತ್ತಿರ ನಡೆದುಕೊಂಡು ಹೋಗಿ ವಾಚ್ ಮಾಡುತ್ತಿದ್ದಾಗ ಆರೋಪಿತ ಮದ್ಯ ಮಾರಾಟ ಮಾಡುವುದು ಕಂಡು ಬಂತು ಎಂದರೆ ಸರಿಯಲ್ಲ. ಆಗ ಚಾಸಾ-1ರವರು ದಾಳಿ ಮಾಡಿ ಮು.ಮಾ. 1 ಮತ್ತು 2ರಂತೆ ಮು.ಮಾ. ಗಳನ್ನು ನಿಮ್ಮ ಸಮಕ್ಷಮ ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ.  ಆಗ ನೀವು ನಿಪಿ-2 ಪಂಚನಾಮೆಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಪಂಚನಾಮೆ ಜರುಗಿಸಿದರೂ ಸಹ ಈಗ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ  ಆರೋಪಿ ಪರ ಶ್ರೀ.ಎಸ್.ಎನ್.ಪಿ.  ವಕೀಲರಿಂದ - ಏನು ಇಲ್ಲ</u>

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ

C.C No. 2004/2023
CW-2 PW-2

ಹೆಸರು : ರಾಜ್ ಕುಮಾರ್

ತಂದೆಯ ಹೆಸರು: ಅಂಬೋಜಿರಾವ್ ಪಾಟೀಲ್

ವಯಸ್ಸು : 53 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಮಂಗಲಗಿ

---

ಪ್ರಮಾಣವಚನ ಬೋಧಿಸಲಾಯಿತು. ದಿಃ 12-01-2026

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ

ನನಗೆ ಚಾಸಾ-3ರವರ ಪರಿಚಯ ಇದೆ.

ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ. ನಾನು ಹೊಲಕ್ಕೆ ಹೋಗುತ್ತಿದ್ದಾಗ ಪೋಲೀಸರು ಕೆಲವು ದಾಖಲೆಗಳ ಮೇಲೆ ನನ್ನ ಸಹಿಗಳನ್ನು ಪಡೆದಿರುತ್ತಾರೆ. ಪೋಲೀಸರು ನನ್ನ ಸಮಕ್ಷಮ ಆರೋಪಿತನಿಂದ ಯಾವುದೇ ಮು.ಮಾ. ನ್ನು ಜಪ್ತುಪಡಿಸಿಕೊಂಡು ಪಂಚನಾಮೆಯನ್ನು ಜರುಗಿಸಿಲ್ಲ. ನಾನು ಆರೋಪಿಯನ್ನು ಈ ಮೊದಲು ನನ್ನ ಊರಿನಲ್ಲಿ ನೋಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ಪಂಚನಾಮೆಯನ್ನು ತೋರಿಸಲಾಗಿ ಅದು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮು.ಮಾ. 2ನ್ನು ತೋರಿಸಲಾಗಿ ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ ಸದರಿ ಸಹಿಯನ್ನು ಮು.ಮಾ. 2ಬಿ ಎಂದು ಗುರುತಿಸಲಾಯಿತು. ನನಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರ ಬಳಿ ಯಾವುದೇ ಹೇಳಿಕೆ ನೀಡಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ

ದಿಃ 05.05.2023 ರಂದು ಪೋಲೀಸರು ನಿಮ್ಮನ್ನು ಪಂಚರಾಗಿ ಬರಲು ಕರೆದಿದ್ದರು ಎಂದರೆ ಸರಿಯಲ್ಲ. ಆಗ ನೀವು ಮತ್ತು ಚಾಸಾ- 3ರವರು ಪಂಚರಾಗಿ ಬರಲು ಒಪ್ಪಿ ಇಲಾಖಾ ವಾಹನದಲ್ಲಿ ಪೋಲೀಸರೊಂದಿಗೆ ಘಟನಾ ಸ್ಥಳಕ್ಕೆ ಹೋಗಿದ್ದೀರಿ ಎಂದರೆ ಸರಿಯಲ್ಲ. ಮಧ್ಯಾಹ್ನ 03.00 ಗಂಟೆಗೆ ಮಂಗಲಗಿ ಗ್ರಾಮದ ಬ್ರಿಡ್ಜ್ ಬಳಿ ತಲುಪಿ ಭವಾನಿ ಗುಡಿ ಕಂಪೌಡ್ ಹತ್ತಿರ ನಡೆದುಕೊಂಡು ಹೋಗಿ ವಾಚ್ ಮಾಡುತ್ತಿದ್ದಾಗ ಆರೋಪಿತ ಮದ್ಯ ಮಾರಾಟ ಮಾಡುವುದು ಕಂಡು ಬಂತು ಎಂದರೆ ಸರಿಯಲ್ಲ. ಆಗ ಚಾಸಾ-1ರವರು ದಾಳಿ ಮಾಡಿ ಮು.ಮಾ. 1 ಮತ್ತು 2ರಂತೆ ಮು.ಮಾ. ಗಳನ್ನು ನಿಮ್ಮ ಸಮಕ್ಷಮ ಪಂಚನಾಮೆಯಡಿಯಲ್ಲಿ ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆಗ ನೀವು ನಿಪಿ-2 ಪಂಚನಾಮೆಗೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಸಮಕ್ಷಮ ಪಂಚನಾಮೆ ಜರುಗಿಸಿದರೂ ಸಹ ಈಗ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್.ಎನ್.ಪಿ. ವಕೀಲರಿಂದ - ಏನು ಇಲ್ಲ

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು )

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.